ಮಾಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ .— ಖಾಲಿ ಇರತಕ್ಕಂಥ ಎಲ್ಲಾ ಹುದ್ದೆಗಳನ್ನು ನಾವು ಭರ್ತಿ ಮಾಡುತ್ತೇವೆ

ಶ್ರೀ ಪಿ. ರಾಮದೇವ್ .— ಹೊಸ ತೆರಿಗೆಗಳನ್ನು ಹಾಕತಕ್ಕ ಸೂಚನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆ. ಇಲ್ಲಿ ಮೊದಲನೆಯದಾಗಿ ಜನತಾ ಸರ್ಕಾರ ಬಂದಿದೆ, 36 ವರ್ಷಗಳನಂತರ ಜನರು ಸರ್ಕಾರವನ್ನು ಬದಲಾವಣೆ ಮಾಡಿದ್ದಾರೆ. ಆದುದರಿಂದ ಈಗ ಹಾಕತಕ್ಕ ತೆರಿಗೆಗಳು ಬಡ ಜನತೆಯ ಮತ್ತು ಮಧ್ಯಮ ವರ್ಗದವರ ಮೇಲೆ ಬೀಳದ ಹಾಗೆ ಎಚ್ಚರಿಕೆ ವಹಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.— ಎಷ್ಟರ ಮಟ್ಟಿಗೆ ಸಾಧ್ಯವೊ ಅಷ್ಟರ ಮಟ್ಟಿಗೆ ಎಚ್ಚರಿಕೆ ವಹಿಸುತ್ತೇವೆ.

ವಿಷಯ : ಶಿರಾ ಟೌನಿಗೆ ಅರಕ್ಷಕ ಠಾಣೆ ಮಂಜೂರಾತಿ

ಪ್ರ. 112 (58) ಶ್ರೀ ವಿ. ಮುದ್ದೇಗೌಡ (ಶಿರಾ).— ಮಾನ್ಯ ಮುಖ್ಯ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ಶಿರಾ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಲ್ಲಿ ಗ್ರಾಮ ರಕ್ಷಕದಳ ರಚಿಸಲಾಗಿದೆ ;

ಆ. ಗ್ರಾಮ ರಕ್ಷಕದಳಗಳನ್ನು ರಚಿಸದಿರುವ ಗ್ರಾಮಗಳ ಸಂಖ್ಯೆ ಎಷ್ಟು ;

ಇ. ಈ ಗ್ರಾಮಗಳಲ್ಲಿ ಗ್ರಾಮ ರಕ್ಷಕ ದಳವನ್ನು ರಚಿಸುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ;

ಈ. ಶಿರಾ ಪಟ್ಟಣದಲ್ಲಿ ಜನಸಂಖ್ಯೆ 25 ಸಾವಿರಕ್ಕಿಂತಲು ಹೆಚ್ಚಿರುವ ಪ್ರಯುಕ್ತ ಪಟಣಕಾಗ್ಗಿ ಒಂದು ಪೋಲೀಸ್ ಠಾಣೆಯನ್ನು ಪ್ರಾರಂಭಿಸಲು ಸರ್ಕಾರದವರು ಉದ್ದೇಶಿಸಿರುವರೆ ?

ಶ್ರೀ ರಾಮಕೃಷ್ಣ ಹೆಗಡೆ .— (ಮುಖ್ಯ ಮಂತ್ರಿಗಳು) :—

ಅ. 112.

ಆ. 137.

ಇ. ಕ್ರಮೇಣವಾಗಿ ಎಲ್ಲಾ ಹಳ್ಳಿಗಳಲ್ಲಿಯೂ ಗ್ರಾಮ ರಕ್ಷಕದಳಗಳನ್ನು ರಚಿಸುವುದು ಸರ್ಕಾರದ ನೀತಿಯಾಗಿದೆ. ಶಿರಾ ತಾಲ್ಲೂಕಿನ ಉಳಿದ ಹಳ್ಳಿಗಳಲ್ಲಿಯೂ ಗ್ರಾಮ ರಕ್ಷಕದಳಗಳನ್ನು ರಚಿಸುವಂತೆ ತುಮಕೂರು ಜಿಲ್ಲಾ ಪೋಲೀಸ್ ಅಧಿಕಾರಿಯವರಿಗೆ ಆದೇಶನೀಡಲಾಗಿದೆ.

ಈ. ಇದು ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಪಿ. ಮೂಡ್ಲೇಗೌಡ.— ಸ್ವಾಮಿ, ಗ್ರಾಮ ರಕ್ಷಕದಳವನ್ನು ನೇಮಕ ಮಾಡಬೇಕಾದರೆ ವರ್ಷಕ್ಕೆ ಇಷ್ಟು ನೇಮಕ ಮಾಡಬೇಕು ಎಂಬ ಟಾರ್ಗೆಟನ್ನು ಸರ್ಕಾರ ನಿಗದಿ ಮಾಡಿದೆಯೇ? ಮತ್ತು ನೇಮಕಮಾಡುವ ಸಂದರ್ಭದಲ್ಲಿ ವಿಳಂಬವಾಗುವುದಕ್ಕೆ ಕಾರಣವೇನು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗೂ ಶಿರಾ ತಾಲ್ಲೂಕಿನಲ್ಲಿ ಆಗಿಂದಾಗ್ಗೆ ಕೆಲವಾರು ಗುಂಪುಗಳ, ಪಂಗಡಗಳ ಮದ್ಯೆ ಘರ್ಷಣೆಗಳು ಆಗುತ್ತವೆ. ಆದುದರಿಂದ ಶಿರಾ ಟಾನಿಗೆ ಒಂದು ಪೋಲೀಸ್ ಠಾಣೆಯನ್ನು ಹಾಕುವುದಕ್ಕೆ ಸಾಧ್ಯವಾಗುತ್ತದೆಯೇ, ಅದನ್ನು ಈ ವರ್ಷ ಪ್ರಾರಂಭಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗಡೆ .— ನಮ್ಮ ರಾಜ್ಯದಲ್ಲಿರತಕ್ಕ ಸುಮಾರು 29 ಸಾವಿರ ಹಳ್ಳಿಗಳಲ್ಲಿ 23 ಸಾವಿರ ಹಳ್ಳಿಗಳಿಗೆ ಗ್ರಾಮ ರಕ್ಷಕದಳವನ್ನು ಒದಗಿಸಿದೆ. ಕೆಲವು ಕಡೆ ಕಾರಣಾಂತರದಿಂದ ಸ್ವಲ್ಪ ವಿಳಂಬವಾಗಿರಬಹುದು ಅದನ್ನು ನಾವು ವಿಚಾರ ಮಾಡುತ್ತೇವೆ. ಮತ್ತೆ ಶಿರಾ ಶಹರದಲ್ಲಿ ಒಂದು ಯೋಗ್ಯವಾದಂಥ ಪೋಲೀಸ್ ಠಾಣೆಬೇಕು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈಗಿರತಕ್ಕ ಪೋಲೀಸ್ ಠಾಣೆ ಶಿರಾ ಶಹರ ಮತ್ತು ಇಡೀ ತಾಲ್ಲೂಕಿಗೆ ಇದೆ. ಇದನ್ನು ಪ್ರತ್ಯೇಕ ಮಾಡಬೇಕು ಎನ್ನತಕ್ಕ ಯೋಜನೆ ಸರ್ಕಾರದ ಮನಸ್ಸಿನಲ್ಲಿದೆ.

ವಿಷಯ : ರೋಗ ತಗಲಿ ಅಂಗವಿಕಲರಾದವರಿಗೆ ಚಿಕಿತ್ಸೆ ನೀಡುವುದು

ಪ್ರ. 113 (61) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ (ಸಾಗರ).— ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಶಿವಮೊಗ್ಗ ಜಿಲ್ಲೆಯ ಹಂದಿಗೋಡು ಮತ್ತು ಇನ್ನಿತರ ಹಳ್ಳಿಗಳಲ್ಲಿ ವಿಶೇಷವಾಗಿ ಹರಿಜನರಿಗೆ ಅಂಗವಿಕಲತೆ ರೋಗ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ. ಎಷ್ಟು ಹಳ್ಳಿಗಳಲ್ಲಿ, ಎಷ್ಟು ಕುಟುಂಬಗಳಲ್ಲಿ ಮತ್ತು ಎಷ್ಟು ವ್ಯಕ್ತಿಗಳಿಗೆ ಈ ರೋಗ ತಗುಲಿದೆ ಎಷ್ಟು ವರ್ಷಗಳಿಂದ ಹರಡಿದೆ ಮತ್ತು ಪ್ರತಿ ವರ್ಷ ರೋಗ ತಗುಲಿದವರ ಸಂಖ್ಯೆ ಎಷ್ಟು ;

ಇ. ಈ ರೋಗಿಗಳ ಔಷಧೋಪಚಾರ ಮತ್ತು ಸುಶ್ರೋಷತೆಗೆ ಸರ್ಕಾರದವರು ಯಾವ ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡಿದ್ದಾರೆ ;

ಈ. ಈ ರೋಗದ ಬಗ್ಗೆ ಈ ವರೆಗೆ ಬಂದ ತಜ್ಞರ ಅಭಿಪ್ರಾಯವೇನು ;

ಉ. ಖಾಯಂ ಅಂಗವಿಕಲತೆಗೆ ಗುರಿಯಾಗುವ ಈ ಕುಟುಂಬಗಳ ಪೋಷಣೆಗೆ ಸರ್ಕಾರದವರು ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ;